ಭಾಗ್ಯಲಕ್ಷ್ಮಿ ಯೋಜನೆ ವಿವರ

947 (155) ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಭಾಗ್ಯಲಕ್ಷ್ಮಿ ಯೋಜನೆಯ ಸವಲತ್ತು ನೀಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಇನ್ನು ಎಷ್ಟು ಅರ್ಜಿಗಳು ವಿಲೆಯಾಗಲು ಬಾಕಿ ಇರುತ್ತದೆ (ತಾಲ್ಲೂಕುವಾರು ವಿವರ ನೀಡುವುದು);

ಶ್ರೀ ಪಿ. ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) 2006–07ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 10,939 ಫಲಾನುಭವಿಗಳಿಗೆ ಯೋಜನೆಯ ಸವಲತ್ತು ನೀಡಲಾಗಿದೆ ತಾಲ್ಲೂಕುವಾರು ವಿವರ ಕೆಳಕಂಡಂತಿದೆ:

ಕ್ರ.ಸಂ.	ತಾಲ್ಲೂಕಿನ ವಿವರ	ಫಲಾನುಭವಿಗಳ ಸಂಖ್ಯೆ
1	ಮಂಗಳೂರು ನಗರ	664
2	ಮಂಗಳೂರು (ಗ್ರಾ)	2623
3	ಬಂಟ್ವಾಳ	2722
4	ಬೆಳ್ತಂಗಡಿ	2012
5	ಪುತ್ತೂರು	1805
6	ಸುಳ್ಯ	1113
	ಒಟ್ಟು	**10,939**

ಆ) 544 ಅರ್ಜಿಗಳು ವಿಲೆಯಾಗಲು ಬಾಕಿ ಇರುತ್ತವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ:

ಕ್ರ.ಸಂ.	ತಾಲ್ಲೂಕಿನ ವಿವರ	ಫಲಾನುಭವಿಗಳ ಸಂಖ್ಯೆ
1	ಮಂಗಳೂರು ನಗರ	43
2	ಮಂಗಳೂರು (ಗ್ರಾ)	134
3	ಬಂಟ್ವಾಳ	103
4	ಬೆಳ್ತಂಗಡಿ	76
5	ಪುತ್ತೂರು	135
6	ಸುಳ್ಯ	53
	ಒಟ್ಟು	544

ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು

948 (974) ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ ಪೂರ್ವ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸನ್ 1984ರಿಂದ ಹುಬ್ಬಳ್ಳಿ ಕಿಮ್ಸ್‌ನಲ್ಲಿ ದಿನಗೂಲಿ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ;

ಆ) ಇದ್ದಲ್ಲಿ, ಯಾವಾಗ ಖಾಯಂಗೊಳಿಸಲಾಗುವುದು;

ಇ) ಈ ದಿನಗೂಲಿ ನೌಕರರನ್ನು ಖಾಯಂಗೊಳಿಸಲು ವಿಳಂಬಕ್ಕೆ ಕಾರಣಗಳೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಸಂಸ್ಥೆಯಲ್ಲಿ ಇಂತಹ ದಿನಗೂಲಿ ನೌಕರರು ಇಲ್ಲದಿರುವುದರಿಂದ ಖಾಯಂ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.